**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS-521/2024** **PW-1**

**ದಿಃ 18.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ ಆರ್ ಸಿ ಬಿ ವಕೀಲರಿಂದಃ**

ನನ್ನ ಗಂಡ ಕೆಲಸ ಮಾಡುತ್ತಿದ್ದ ಕಂಪನಿಯಿಂದ ನನಗೆ ಪ್ರತಿ ತಿಂಗಳು ಪಿಂಚಣಿ ಬರುತ್ತದೆಂದರೆ ಸರಿ. ದಾವಾ ಆಸ್ತಿಸಂಖ್ಯೆ 677 ಪ್ರತಿವಾದಿಯ ಹೆಸರಿನಲ್ಲಿದೆ ಎಂದು ತೋರಿಸಲು ಯಾವದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ಹೆಸರಿನಲ್ಲಿ ಯಾವದೇ ಒಟ್ಟು ಕುಟುಂಬದ ಆಸ್ತಿಗಳು ಇಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಆಸ್ತಿ ಸಂಖ್ಯೆ 3 ರಿಂದ 7 ರವರೆಗಿನ ದಾಖಲೆಗಳು ನನ್ನ ಬಳಿ ಇದ್ದು ಆದರೂ ಅವುಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಅವುಗಳು ನನ್ನ ಬಳಿ ಇಲ್ಲ ಎನ್ನುತ್ತಾರೆ. ನನ್ನ ಗಂಡನ ಕ್ಲೇಮ ಅಮೌಂಟ ಆತ ಜೀವಂತ ಇದ್ದಾಗಲೇ ಬಂದಿದೆ ಎಂದರೆ ಸರಿ. ಅವರು ಮಾಡಿದ ಆಸ್ಪತ್ರೆ ಖರ್ಚು ಮತ್ತು ಎಲ್ ಐ ಸಿ ಎಫ್ ಡಿ ಇವುಗಳೆಲ್ಲವನ್ನೂ ನನ್ನ ಯಜಮಾನರು ಅದೇ ಹಣದಿಂದ ಇಟ್ಟಿದ್ದು ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಕಾರಣ ಅವೆಲ್ಲಾವನ್ನು ನನಗೇನೂ ಹೇಳಿಲ್ಲ ಎನ್ನುತ್ತಾರೆ. ನಾನು ದಾವಾದಲ್ಲಿ ತೋರಿಸಿದ ಯಾವದೇ ಆಸ್ತಿಗಳು ಪ್ರತಿವಾದಿ ಹೆಸರಿನಲ್ಲಿ ಇಲ್ಲ ಎಂದರೆ ಸರಿ. ದಾವಾ ಆಸ್ತಿ ನಂಃ3 ರಿಂದ 7 ರಲ್ಲಿ ತೋರಿಸಿದ ಹಣವನ್ನು ತೆಗೆದು ಪ್ರತಿವಾದಿಯ ಕಡೆ ಕೊಟ್ಟಿದ್ದಾರೆಂದು ತೋರಿಸಲು ಯಾವದಾದರೂ ದಾಖಲೆ ಇದೆಯಾ ಎಂದರೆ ಸಾಕ್ಷಿ ಯಾವದೂ ದಾಖಲೆ ಇಲ್ಲ ಎನ್ನುತ್ತಾರೆ. ದಾವಾ ಆಸ್ತಿಗಳು ಪ್ರತಿವಾದಿ ಹೆಸರಿನಲ್ಲಿ ನಾನು ಹೇಳುವಂತೆ ಇರುವದಿಲ್ಲ ಆ ಕಾರಣಕ್ಕೆ ನಾನು ದಾವಾದಲ್ಲಿ ಕೇಳುವ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಅಂದರೆ ಖಂಡಿಕೆ 3, 5 ರಿಂದ 10 ಇವುಗಳಲ್ಲಿ ಬರೆಸಿರುವ ಅಂಶಗಳು ಸುಳ್ಳಿನಿಂದ ಕೂಡಿವೆ ಎಂದರೆ ಸಾಕ್ಷಿ ನಿಜ ಇದೆ ಎನ್ನುತ್ತಾರೆ. ದಾವಾ ಆಸ್ತಿಗಳು ಪ್ರತಿವಾದಿ ಹೆಸರಿನಲ್ಲಿ ಇಲ್ಲದ ಕಾರಣ ನಾನು ಸಲ್ಲಿಸಿರುವ ದಾವೆಯು ಕಾನೂನಿನ ಅಡಿಯಲ್ಲಿ

ಊರ್ಜಿತವಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನಗೆ 3/4 ಅಂಶ ಹಿಸ್ಸೆ ಇದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**